**ಓ ಎಸ್ ನಂಃ 144-14**
**ಡಿ ಡಬ್ಲ್ಯೂ ಃ 5**

**ದಿಃ 28-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಲ್ ಜಿ ಜಿ ವಕೀಲರಿಂದ**

19. ನಾನು ಕಾನೂನು ಪದವಿಗೆ 1980 ರಲ್ಲಿ ಅಡ್ಮಿಷನ್ ಪಡೆದಿರಬಹುದು ನೆನಪಿಲ್ಲ. ನಾನು 1983 ರಲ್ಲಿ ವಕೀಲನಾಗಿರುತ್ತೇನೆ. ಈ ದಾವೆಯನ್ನು ಹೂಡಿದ ಎಲ್ಲಾ ಪಕ್ಷಗಾರರ ಪರಿಚಯ ನನಗೆ ಇರುವುದಿಲ್ಲ. ಈ ದಾವೆಯ ಕೆಲವು ಪ್ರತಿವಾದಿಗಳು ನನ್ನ ವಂಶದವರೇ ಆಗಿರುತ್ತಾರೆ. ದಾವಾ ಆಸ್ತಿಗಳು ಮೂಲತಃ ನನ್ನ ತಂದೆಗೆ ಸೇರಿದ್ದವು ಎಂದರೆ ಅವುಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಆಗಿರುತ್ತವೆ ಎಂದು ಹೇಳುತ್ತಾರೆ. ನನ್ನ ತಂದೆ ಜೀವಿತಾವಧಿಯಲ್ಲಿ ನನ್ನ ತಂದೆಯೇ ದಾವಾ ಆಸ್ತಿಗಳ ಸ್ವಾಧೀನತೆಯನ್ನು ಹೊಂದಿದ್ದರು ಎಂದರೆ ನಿಜ. ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ತಾವು ಸಂಪಾದಿಸಿದ ಆಸ್ತಿಗಳನ್ನು ಮಾರಾಟ ಮಾಡಿರುವುದಿಲ್ಲ. ದಾವಾ ಆಸ್ತಿಗಳನ್ನು ನನ್ನ ತಂದೆ ಯಾವ ಯಾವ ವರ್ಷ ಖರೀದಿ ಮಾಡಿದ್ದರು ಗೊತ್ತಿಲ್ಲ. ಈ ದಾವೆಯನ್ನು ಹೂಡಿದ ನಂತರ ದಾವಾ ಆಸ್ತಿಗಳನ್ನು ನನ್ನ ತಂದೆ ಯಾವ ಯಾವ ವರ್ಷ ಖರೀದಿ ಮಾಡಿರುತ್ತಾರೆ ಎಂಬುದನ್ನು ತಿಳಿದುಕೊಂಡಿಲ್ಲ. ದಾವಾ ಆಸ್ತಿಗಳನ್ನು ಖರೀದಿ ಮಾಡುವ ಕಾಲಕ್ಕೆ ಅದು ನನ್ನ ಗಮನದಲ್ಲಿರಲಿಲ್ಲ ಎಂದರೆ ನಾನು ಕೇತೋಹಳ್ಳಿಯಲ್ಲಿ ಇರಲಿಲ್ಲ, ನಾನು 1979 ರವರೆಗೂ ಬೇರೆ ಕಡೆ ವಿದ್ಯಾಭ್ಯಾಸ ಮಾಡುತ್ತಿದ್ದೆ ಎಂದು ಹೇಳುತ್ತಾರೆ. ವಿದ್ಯಾಭ್ಯಾಸವನ್ನು ನನ್ನ ತಂದೆ ಮಾಡಿಸುತ್ತಿದ್ದರು ಎಂದರೆ ನಾನೇ ಸ್ವಂತ ಕೆಲಸ ಮಾಡಿ ಸ್ಕಾಲರ್ ಶಿಪ್ ಪಡೆದು, ಉಚಿತ ಆಸ್ಟಲ್ ನಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದೆ ಎಂದು ಹೇಳುತ್ತಾರೆ. ಅಂದರೆ ಆಗ ನನ್ನ ಮನೆಯ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇರಲಿಲ್ಲವಾ ಎಂದರೆ ಚೆನ್ನಾಗಿತ್ತು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನನ್ನ ತಂದೆ ತಮ್ಮ ಹೆಣ್ಣು ಮಕ್ಕಳ ಮದುವೆ ಮಾಡುತ್ತಿದ್ದುದ್ದರಿಂದ ನಾನು ಹಣ ಕೇಳಿರಲಿಲ್ಲ ಎಂದು ಹೇಳುತ್ತಾರೆ. ನಾನು ನನ್ನ ಸಹೋದರಿಯರ ಮದುವೆಗೆ ಸಹಾಯ ಮಾಡಿಲ್ಲ. 5 ನೇ ಪ್ರತಿವಾದಿ ಅವಿದ್ಯಾವಂತರಾಗಿದ್ದು ಕೇತೋಹಳ್ಳಿಯಲ್ಲಿ ವ್ಯವಸಾಯ ಮಾಡುತ್ತಿದ್ದರು. ನಾನು ವಕೀಲಿ ವೃತ್ತಿ ಆರಂಭಿಸಿದ ನಂತರ ಕೇತೋಹಳ್ಳಿಯಲ್ಲಿ ವಾಸಮಾಡುತ್ತಿದ್ದೆ ಈಗಲೂ ಸಹ ಅಲ್ಲಿಯೇ ವಾಸವಿದ್ದೇನೆ ನ್ಯಾಯಾಲಯಕ್ಕೆ ಹೋಗಿ ಬಂದು ಮಾಡುತ್ತೇನೆ ಎಂದು ಹೇಳುತ್ತಾರೆ. ನಾನು 3 ನೇ ಪ್ರತಿವಾದಿಯ ಮಗಳನ್ನು ಮದುವೆಯಾಗಿರುತ್ತೇನೆ. 3 ನೇ ಪ್ರತಿವಾದಿಯ ಮಕ್ಕಳು ಮತ್ತು ನನ್ನ ಹೆಂಡತಿ ನನ್ನ ಮನೆಯಲ್ಲಿಯೇ ಇದ್ದರು. 3 ನೇ ಪ್ರತಿವಾದಿಯನ್ನು ಬ್ಯಾಲಕೆರೆ ಊರಿನವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. 3 ನೇ ಪ್ರತಿವಾದಿಯ ಗಂಡನಿಗೆ ಪಾರ್ಶ್ವವಾಯು 1969 ರಲ್ಲಿ ಆಗಿದ್ದು ನಂತರ

ವೀರಭದ್ರಯ್ಯರವರು ತೀರಿಕೊಂಡಿದ್ದರಿಂದ ಮಕ್ಕಳನ್ನು 3 ನೇ ಪ್ರತಿವಾದಿಗೆ ನೋಡಲು ಆಗುವುದಿಲ್ಲವೆಂದು ನನ್ನ ತಂದೆ 3 ನೇ ಪ್ರತಿವಾದಿಯ ಮಕ್ಕಳನ್ನು ಕೇತೋಹಳ್ಳಿಯಲ್ಲಿಗೆ ಕರೆದುಕೊಂಡು ಬಂದರು. ನನ್ನ ತಂದೆ 3 ನೇ ಪ್ರತಿವಾದಿಯನ್ನು ಕರೆದುಕೊಂಡು ಬಂದಿರಲಿಲ್ಲ ಅವರು ಬ್ಯಾಲದ ಕೆರೆಯಲ್ಲಿಯೇ ಇದ್ದರು. 3 ನೇ ಪ್ರತಿವಾದಿ ಮಕ್ಕಳ ಆಗುಹೋಗುಗಳು ಮತ್ತು ವಿದ್ಯಾಭ್ಯಾಸ ನಮ್ಮ ಮನೆಯಲ್ಲಿ ನಡೆಯುತ್ತಿತ್ತು. 3 ನೇ ಪ್ರತಿವಾದಿಯ ಒಬ್ಬ ಮಗಳನ್ನು ನಾನು ಮದುವೆಯಾಗಿರುತ್ತೇನೆ. ಉಳಿದ ಮಕ್ಕಳು 1999 ರವೆರೆಗೆ ನಮ್ಮ ಮನೆಯಲ್ಲಿಯೇ ವಿದ್ಯಾಭಾಸ ಮಾಡಿಕೊಂಡಿದ್ದರು ಅವರ ಖರ್ಚನ್ನು ನಾವೇ ನೋಡಿಕೊಳ್ಳುತ್ತಿದ್ದೆವು. 3 ನೇ ಪ್ರತಿವಾದಿಯ ಮಕ್ಕಳನ್ನು ನಮ್ಮ ಮನೆಗೆ ಕರೆದುಕೊಂಡು ಬರುವುದು ನನ್ನ ತೀರ್ಮಾನವೋ ಅಥವಾ ನನ್ನ ತಂದೆಯ ತೀರ್ಮಾನವೋ ಎಂದರೆ ನನ್ನ ತೀರ್ಮಾನ ಆಗಿತ್ತು ಎಂದು ಹೇಳುತ್ತಾರೆ. ನನ್ನ ಮಾವ ವೀರಭದ್ರಯ್ಯರವರಿಗೆ ನನ್ನ ಮೇಲೆ ಪ್ರೀತಿ ಇತ್ತು ಆ ಕಾರಣಕ್ಕಾಗಿ 3 ನೇ ಪ್ರತಿವಾದಿಯ ಮಕ್ಕಳನ್ನು ನಮ್ಮ ಮನೆಗೆ ಕರೆದುಕೊಂಡು ಬಂದೆವು.

20. 3 ನೇ ಪ್ರತಿವಾದಿಗೆ ಬೋನ್ ಕ್ಯಾನ್ಸರ್ ಆಗಿದ್ದು ಅವರನ್ನು ಕಿದ್ವಾಯಿ ಆಸ್ಪತ್ರೆಗೆ ಸೇರಿಸಿದ್ದೆವು. ವೈದ್ಯರು 3 ನೇ ಪ್ರತಿವಾದಿಯನ್ನು ಕರೆದುಕೊಂಡು ಹೋಗಬೇಕು ಎಂದು ಹೇಳಿದ್ದು ಅದರಂತೆ 3 ನೇ ಪ್ರತಿವಾದಿಯನ್ನು ಕೇತೋಹಳ್ಳಿಯ ನಮ್ಮ ಮನೆಗೆ ಕರೆದುಕೊಂಡು ಬಂದೆವು. 3 ನೇ ಪ್ರತಿವಾದಿ ನಮ್ಮ ಮನೆಯಲ್ಲಿ 2 1/2 ವರ್ಷ ಇದ್ದರು. 3 ನೇ ಪ್ರತಿವಾದಿ ತಮ್ಮನ್ನು 8 ನೇ ಪ್ರತಿವಾದಿಯ ಮನೆಗೆ ಬಿಡಬೇಕೆಂದು ಹೇಳಿದ್ದರಿಂದ 8 ನೇ ಪ್ರತಿವಾದಿಯ ಮನೆಗೆ ಬಿಟ್ಟಿದ್ದೆವು ಎಂದು ಹೇಳುತ್ತಾರೆ. 2 1/2 ವರ್ಷದಲ್ಲಿ 3 ನೇ ಪ್ರತಿವಾದಿಯ ಖರ್ಚು ವೆಚ್ಚವನ್ನು ನಾನೇ ನೋಡಿಕೊಂಡಿದ್ದೆ. 3 ನೇ ಪ್ರತಿವಾದಿ ಬ್ಯಾಲಕೆರೆಯಲ್ಲಿ ತೀರಿಕೊಂಡಿರುತ್ತಾರೆ. ಬ್ಯಾಲಕೆರೆಯಲ್ಲಿ ವೀರಭದ್ರಯ್ಯರವರಿಗೆ ಮನೆ ಇತ್ತು ಅದು ಬಿದ್ದುಹೋಗಿತ್ತು ಆದ ಕಾರಣ 3 ನೇ ಪ್ರತಿವಾದಿಗೆ ನಾನು ಬ್ಯಾಲಕೆರೆಯಲ್ಲಿ ಬಾಡಿಗೆ ಮನೆ ಮಾಡಿಕೊಟ್ಟಿದ್ದೆ. 3 ನೇ ಪ್ರತಿವಾದಿ ಬ್ಯಾಲಕೆರೆಗೆ ಬಂದು ಒಂದೇ ರಾತ್ರಿ ವಾಸವಿದ್ದರು. 3 ನೇ ಪ್ರತಿವಾದಿಯ ಅಂತ್ಯಕ್ರಿಯೆಯನ್ನು ಅವರ ಮಗ 8 ನೇ ಪ್ರತಿವಾದಿ ಮತ್ತು ನಾನು ಸೇರಿ ಮಾಡಿದ್ದೆವು.

21. ನನ್ನ ತಂದೆ ದಿನಾಂಕಃ 17-11-1982 ರಲ್ಲಿ ತೀರಿಕೊಂಡಿದ್ದರು. ನನ್ನ ತಂದೆ ತೀರಿಕೊಳ್ಳುವಾಗ ನಾನು ಕೊನೆಯ ವರ್ಷದ ಕಾನೂನು ಪದವಿಯ ಪರೀಕ್ಷೆ ಬರೆದಿದ್ದೆ ಆದರೆ ಫಲಿತಾಂಶ ಬಂದಿರಲಿಲ್ಲ. ನನ್ನ ತಂದೆ ತೀರಿಕೊಂಡ ನಂತರ ಜಮೀನುಗಳ ಉಸ್ತುವಾರಿಯನ್ನು ನನ್ನ ತಾಯಿ ಮತ್ತು ಅಣ್ಣ ನೋಡಿಕೊಳ್ಳುತ್ತಿದ್ದರು. ನನ್ನ ಕುಟುಂಬದ ಜಮೀನುಗಳ ಖಾತೆಯನ್ನು ನನ್ನ ಅಣ್ಣ ಮತ್ತು ತಾಯಿಯ ಒಪ್ಪಿಗೆ ಮೇರೆಗೆ ನನ್ನ ಹೆಸರಿಗೆ ಆಗಿದ್ದವು. 1983 ರಲ್ಲಿ ನಮ್ಮ ಕುಟುಂಬದ ಜಮೀನುಗಳ ಖಾತೆ ನನ್ನ ಹೆಸರಿಗೆ ಆಗಿದ್ದವು. ನನ್ನ ತಾಯಿ ಮತ್ತು ಅಣ್ಣ ಗ್ರಾಮಲೆಕ್ಕಾಧಿಕಾರಿಗಳ ಮುಂದೆ ಮೌಖಿಕವಾಗಿ ಖಾತೆ ವರ್ಗಾವಣೆಗೆ ಒಪ್ಪಿಗೆ ಕೊಟ್ಟಿದ್ದರಿಂದ ನನ್ನ ಹೆಸರಿಗೆ ದಾವಾ ಆಸ್ತಿಗಳ ಖಾತೆ ನನ್ನ ಹೆಸರಿಗೆ ಆಗಿತ್ತು. ದಾವಾ ಆಸ್ತಿಗಳಲ್ಲಿ ಒಂದು

ಆಸ್ತಿಯನ್ನು ಮಾರಾಟಮಾಡಿದ್ದನ್ನು ಹೊರತುಪಡಿಸಿ ಉಳಿದ ದಾವಾ ಆಸ್ತಿಗಳ ಖಾತೆ ನನ್ನ ಹೆಸರಿನಲ್ಲಿರುತ್ತವೆ. ದಾವಾ ಆಸ್ತಿಗಳ ಖಾತೆ ಬದಲಾವಣೆಯನ್ನು ನನ್ನ ಹೆಸರಿಗೆ ಮಾಡಿಸಿಕೊಳ್ಳಲು ನನ್ನ ಸಹೋದರಿಯರ ಒಪ್ಪಿಗೆ ಪಡೆದಿದ್ದರಾ ಎಂದರೆ ಗ್ರಾಮ ಲೆಕ್ಕಾಧಿಕಾರಿಗಳು ಅವರ ಒಪ್ಪಿಗೆ ಬಗ್ಗೆ ನಮ್ಮನ್ನು ಕೇಳಿರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಸಹೋದರಿಯರು ನಮ್ಮ ಜೊತೆ ವಾಸವಿರಲಿಲ್ಲ ಆದ ಕಾರಣ ಅವರ ಒಪ್ಪಿಗೆ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ.

22. ದಾವಾ ಆಸ್ತಿಗಳು ನನ್ನ ಹೆಸರಿಗೆ ಬದಲಾವಣೆ ಆದ ಮೇಲೆ ನನ್ನ ಮತ್ತು ನನ್ನ ಅಣ್ಣನ ಮದ್ಯೆ ವಿಭಾಗ ಆಗಿತ್ತು. ನಾನು ಮತ್ತು ನನ್ನ ಅಣ್ಣ ಈವರೆಗೂ ಒಟ್ಟು ಕುಟುಂಬದಲ್ಲಿ ಇರುತ್ತೇವೆ ಎಂದರೆ ನಿಜ. ನನ್ನ ಮತ್ತು ನನ್ನ ಅಣ್ಣನ ಮಕ್ಕಳು ವಯಸ್ಕರಾಗಿರುತ್ತಾರೆ. 14 ನೇ ದಾವಾ ಆಸ್ತಿಯನ್ನು ಹೊರತುಪಡಿಸಿ ಉಳಿದ ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ನಾನು ಮತ್ತು ನನ್ನ ಅಣ್ಣ ಭಾಗ ಮಾಡಿಕೊಳ್ಳಲು ಪ್ರಯತ್ನ ಪಟ್ಟಿಲ್ಲ ಮುಂದೆಯೂ ಮಾಡುವುದಿಲ್ಲ ಎಂದು ಹೇಳುತ್ತಾರೆ. ಆದ ಕಾರಣ ನಾನು ಮತ್ತು ನನ್ನ ಅಣ್ಣ ದಾವಾ ಆಸ್ತಿಗಳ ಜಂಟಿ ಸ್ವಾಧೀನತೆಯನ್ನು ಹೊಂದಿರುತ್ತೇವೆ. ದಾವಾ ಆಸ್ತಿಗಳ ಖಾತೆ ಮತ್ತು ಪಹಣಿ ನನ್ನ ಹೆಸರಿಗೆ ಇದ್ದರೂ ಸಹ ನನ್ನ ಅಣ್ಣನಿಗೂ ಸಹ ದಾವಾ ಆಸ್ತಿಗಳಲ್ಲಿ ಸಮನಾದ ಭಾಗ ಇದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ತಂದೆಯೂ ಸಹ ಹೇಳಿದ್ದರು ಎಂದು ಹೇಳುತ್ತಾರೆ. ನನ್ನ ತಂದೆ ನನ್ನನ್ನು ಕುರಿತು ದಾವಾ ಆಸ್ತಿಗಳಲ್ಲಿ ಇಬ್ಬರು ಭಾಗ ಮಾಡಿಕೊಳ್ಳಿ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಈ ವಿಷಯವನ್ನು ನನ್ನ ತಂದೆ ಯಾವ ಇಸವಿಯಲ್ಲಿ ಹೇಳಿದ್ದರು ನೆನಪಿಲ್ಲ. ಈ ವಿಷಯವನ್ನು ನನ್ನ ತಂದೆ ತಾವು ತೀರಿಕೊಳ್ಳುವ ಎಷ್ಟು ವರ್ಷಗಳ ಮೊದಲು ಹೇಳಿದ್ದರು ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ನೆನಪಿಲ್ಲ ಎಂದು ಹೇಳುತ್ತಾರೆ, ಕಾರಣ ನನಗೆ ವಯಸ್ಸಾಗಿದೆ.

23. 8 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ದಾಖಲೆಯನ್ನು ಹಾಜರುಪಡಿಸಿದಾಗ ನನಗೆ ನಿಡಿ 2 ರ ಬಗ್ಗೆ ಗೊತ್ತಾಗಿರುತ್ತದೆ. ಸಾಕ್ಷಿ ಮುಂದುವರೆದು ಜೆರಾಕ್ಸ್ ಕಾಪಿಯನ್ನು ನೋಡಿದ ನಂತರ ವಿಲ್ ಆಗಿದ್ದು ನನಗೆ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**